

بِسْمِ اللّٰهِ الرَّحْمٰنِ الرَّحِيمِ

# ಶ್ರೇಷ್ಠ ವ್ಯಕ್ತಿತ್ವ – ಹಂಝು ಇಬ್ನು ಅಬ್ದುಲ್ ಮುತ್ತಲಿಬ್ (ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **04–05–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರವಾದಿಯಾಗಿ ನಿಯೋಜಿತರಾದಾಗ ಅರಬ್ ಜನತೆಯ ಸಂಸ್ಕೃತಿ, ನೈತಿಕತೆ ಮತ್ತು ಆಧ್ಯಾತ್ಮಿಕ ಸ್ಥಿತಿ ಹೇಗಿತ್ತು. ಮನೆ ಮನೆಗಳಲ್ಲಿ ಜಗಳ, ಮದ್ಯಪಾನ, ವ್ಯಭಿಚಾರ, ಲೂಟಿ, ಒಟ್ಟಾರೆ ಹೇಳುವುದಾದರೆ ಪ್ರತಿಯೊಂದು ಕೆಡುಕು ಅವರಲ್ಲಿ ಇದ್ದುವು. ಅಲ್ಲಾಹನೊಂದಿಗೆ ಸಂಬಂಧವಾಗಲಿ ಸದ್ಗುಣಗಳಾಗಲಿ ಅವರಲ್ಲಿ ಇರಲಿಲ್ಲ. ಪ್ರತಿಯೊಬ್ಬನು ಒಬ್ಬ ಫಿರ್‌ಔನನಾಗಿ ತಿರುಗಾಡುತ್ತಿದ್ದನು. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಮಿಸಿದ ನಂತರ ಅರಬಿಗಳು ಇಸ್ಲಾಮಿನಲ್ಲಿ ಪ್ರವೇಶಿಸಿದಾಗ ಅವರಲ್ಲಿ ದೇವನ ಬಗ್ಗೆ ಎಂತಹ ಪ್ರೀತಿ ಮತ್ತು ಸಾಮೂಹಿಕ ಐಕ್ಯದ ಆತ್ಮ ಹುಟ್ಟಿತೆಂದರೆ ಪ್ರತಿಯೊಬ್ಬನು ಅಲ್ಲಾಹನ ಮಾರ್ಗದಲ್ಲಿ ಜೀವಾರ್ಪಣೆ ಮಾಡಲು ಸಿದ್ಧನಾದನು. ಅವರು ಬೈಅತ್‌ನ ವಾಸ್ತವಿಕತೆಯನ್ನು ಪ್ರಕಟಿಸಿದರು ಮತ್ತು ತಮ್ಮ ಕರ್ಮಗಳ ಮೂಲಕ ಅದರ ಉದಾಹರಣೆ ತೋರಿಸಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರು ತಮ್ಮ ನಿಷ್ಠಾವಂತಿಕೆಯ ಎಂತಹ ಉದಾಹರಣೆ ತೋರಿಸಿದರೆಂದರೆ ಅಂತಹ ಉದಾಹರಣೆ ಹಿಂದೆ ಯಾರೂ ತೋರಿಸಿರಲಿಲ್ಲ. ಅನಂತರ ಸಹ ಅಂತಹ ಉದಾಹರಣೆ ಕಾಣಲು ಸಿಗುವುದಿಲ್ಲ. ಆದರೆ ಅಲ್ಲಾಹನು ಇಚ್ಛಿಸುವುದಾದರೆ ಇನ್ನು ಮುಂದೆ ಹಾಗೆ ಮಾಡಲು ಸಾಧ್ಯವಿದೆ. ಆ ಉದಾಹರಣೆಗಳಿಂದ ಬೇರೆಯವರಿಗೆ ಲಾಭವಾಗುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜಮಾಅತ್ ಬಗ್ಗೆ ಹೇಳುತ್ತಾರೆ, ಅಲ್ಲಾಹನು ಈ ಜಮಾಅತಿನಲ್ಲಿ ಅಂತಹ ಉದಾಹರಣೆಗಳನ್ನು ಸೃಷ್ಟಿಸಬಲ್ಲನು ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಸಹಾಬರ ಬಗ್ಗೆ ಎಷ್ಟು ಚೆನ್ನಾಗಿ ಹೇಳಿದ್ದಾನೆ: **ಮಿನಲ್ ಮೂಮಿನೀನ ರಿಜಾಲುನ್ ಸದಖೂ ಮಾ ಆಹದುಲ್ಲಾಹ ಅಲೈಹಿ, ಫಮಿನ್‌ಹುಮ್ ಮನ್‌ಖಝಾ ನಹ್‌ಬಹೂ ವ ಮಿನ್‌ಹುಮ್ ಮನ್‌ಯನ್‌ತಝಿರು.** ಸತ್ಯವಿಶ್ವಾಸಿಗಳಲ್ಲಿ ಎಂತಹ ಪುರುಷರಿದ್ದಾರೆಂದರೆ ಅವರು ಅಲ್ಲಾಹನೊಂದಿಗೆ ಮಾಡಿದ ವಾಗ್ದಾನವನ್ನು ಈಡೇರಿಸಿ ತೋರಿಸಿಕೊಟ್ಟರು. ಅವರಲ್ಲಿ ಕೆಲವರು ತಮ್ಮ ಜೀವವನ್ನು ಅರ್ಪಿಸಿರುವರು. ಬೇರೆ ಕೆಲವರು ತಮ್ಮ ಜೀವಗಳನ್ನು ಅರ್ಪಿಸಲು ಸಿದ್ಧರಾಗಿದ್ದಾರೆ. (33:24). ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸಹಾಬರನ್ನು ಪ್ರಶಂಸಿ ಹೇಳಿರುವ ಪವಿತ್ರ ಖುರ್‌ಆನಿನ ವಚನಗಳನ್ನು ಒಟ್ಟಿಗೆ ಸೇರಿಸಿ ನೋಡುವುದಾದರೆ ಅದಕ್ಕಿಂತ ಉತ್ತಮವಾದ ಸದ್ಗುಣಗಳ ವರ್ಣನೆ ಬೇರೆ ಇಲ್ಲ. ಆದುದರಿಂದ ಸಹಾಬರು ಮಾಡಿದ ಒಳಿತುಗಳ ಮತ್ತು ಬಲಿದಾನಗಳ ಉದಾಹರಣೆಗಳು ನಮಗೆ ಮಾದರಿಯಾಗಿರುವ ಸದ್ಗುಣಗಳಾಗಿವೆ.

ನಾನು ಸಹಾಬರ ಬಗ್ಗೆ ಪ್ರಸ್ತಾಪಿಸುತ್ತಾ ಇರುತ್ತೇನೆ. ಅವರಲ್ಲಿ ಬದರಿನ ಸಹಾಬರು ಇದ್ದಾರೆ ಮತ್ತು ಬೇರೆ ಕೆಲವು ಸಹಾಬಿಗಳೂ ಇದ್ದಾರೆ. ನಾನು ಯೋಚಿಸಿದೆ ಈಗ ನಾನು ಬದರ್ ಯುದ್ಧದಲ್ಲಿ ಭಾಗವಹಿಸಿದ ಸಹಾಬರ ಬಗ್ಗೆ ಪ್ರಸ್ತಾಪಿಸಬೇಕೆಂದು. ಅವರಿಗೆ ವಿಶಿಷ್ಟವಾದೊಂದು ಸ್ಥಾನವಿದೆ. ಅವರು ಎಂತಹ ಜನರಾಗಿದ್ದರೆಂದರೆ ಅಲ್ಲಾಹನು ಅವರಿಂದ ಸಂಪ್ರೀತನಾದನು. ಆ ಜನರು ಅಲ್ಲಾಹನ ವಿಶಿಷ್ಟ ಸಂಪ್ರೀತಿ ಗಳಿಸಿದವರಾಗಿದ್ದರು. ಇಂದು ನಾನು ಹಝ್ರತ್ ಹಮ್ಝು ಬಿನ್ ಮುತ್ತಲಿಬರ ಬಗ್ಗೆ ಪ್ರಸ್ತಾಪಿಸುವೆನು. ಅವರು ಸಯ್ಯಿದುಶ್ಶುಹದಾ (ಶಹೀದರ ನಾಯಕ) ಎಂಬ ಬಿರುದನ್ನೂ ಪಡೆದವರಾಗಿದ್ದರು. ಅದೇ ರೀತಿ ಅಸದುಲ್ಲಾಹ್ (ಅಲ್ಲಾಹನ ಸಿಂಹ), ಅಸದು ರಸೂಲ್ (ಸಂದೇಶವಾಹರ ಸಿಂಹ) ಎಂಬ ಬಿರುದುಗಳೂ ಅವರಿಗಿತ್ತು. ಅವರು ಖುರೈಶಿಗಳ ಮುಖಂಡ ಅಬ್ದುಲ್ ಮುತ್ತಲಿಬರ ಪುತ್ರರಾಗಿದ್ದರು. ಅವರು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಚಿಕ್ಕಪ್ಪನಾಗಿದ್ದರು. ಅವರ ಮಾತೆಯ ಹೆಸರು ಹಾಲ ಎಂದಾಗಿತ್ತು. ಹಾಲ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತೆ ಹಝ್ರತ್ ಆಮಿನರವರ ಚಿಕ್ಕಪ್ಪನ ಮಗಳಾಗಿದ್ದರು. ಹಝ್ರತ್ ಹಮ್ಝು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಎರಡು ವರ್ಷ ಅಥವಾ ಮತ್ತೊಂದು ವರದಿ ಪ್ರಕಾರ ನಾಲ್ಕು ವರ್ಷ ಹೆಚ್ಚು ಪ್ರಾಯದವರಾಗಿದ್ದರು. ಹಝ್ರತ್ ಹಮ್ಝು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಾಲೂಡಿಸುವಿಕೆಗೆ ಸಂಬಂಧಿಸಿ ಸಹೋದರನೂ ಆಗಿದ್ದರು. ಏಕೆಂದರೆ ಒಬ್ಬ ದಾಸಿ ಮಹಿಳೆ ಶಈಬ ಅವರಿಬ್ಬರಿಗೂ ಹಾಲೂಡಿಸಿದ್ದರು. ಹಝ್ರತ್ ಹಮ್ಝು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವತ್ತಿನ ಆರನೆಯ ವರ್ಷದಲ್ಲಿ ದಾರ್‌ಅರ್‌ಖಮ್ ಕಾಲದಲ್ಲಿ ಇಸ್ಲಾಮ್ ಧರ್ಮವನ್ನು ಅಂಗೀಕರಿಸುವ ಭಾಗ್ಯ ಗಳಿಸಿದರು.

ಹಝ್ರತ್ ಹಮ್ಝು ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸಿದ ಕುರಿತು ಚಾರಿತ್ರಿಕ ಸಂಭವವಾಗಿ ತನ್ನದೇ ಶೈಲಿಯಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸಿದ್ದಾರೆ. ಅದರ ಸ್ವಲ್ಪ ಭಾಗ ನಾನು ವಿವರಿಸುವೆನು. ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಫಾ ಮತ್ತು ಮರ್ವಾ ಬೆಟ್ಟಗಳ ಮಧ್ಯೆ ಒಂದು ಬಂಡೆ ಕಲ್ಲಿನ ಮೇಲೆ ಕುಳಿತಿದ್ದರು. ಅಲ್ಲಾಹನ ಏಕತ್ವವನ್ನು ಹೇಗೆ ಸ್ಥಾಪಿಸುವುದು ಎಂಬುದರ ಬಗ್ಗೆ ನಿಶ್ಚಯವಾಗಿಯೂ ಅವರು ಚಿಂತಿಸುತ್ತಿದ್ದಿರಬಹುದು. ಆಗ ಅಲ್ಲಿಗೆ ಅಬೂಜಹಲ್ ಬಂದನು. ಅವನು ಅವರನ್ನು ಕಠಿಣವಾಗಿ ಬೈಯಲು ಪ್ರಾರಂಭಿಸಿದನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೌನವಾಗಿಯೇ ಇದ್ದರು. ಅವರು ಒಂದು ಶಬ್ದ ಸಹ ತನ್ನ ಬಾಯಿಯಿಂದ ಹೊರಡಿಸಲಿಲ್ಲ. ಅಬೂಜಹಲ್ ತನಗೆ

ತೃಪ್ತಿಯಾಗುವ ತನಕ ಬೈದ ನಂತರ ಮುಂದೆ ಹೋಗಿ ಅವರ ಮುಖಕ್ಕೆ ಹೊಡೆದನು. ಆಗ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಏನೂ ಹೇಳಲಿಲ್ಲ. ಅಲ್ಲಿ ಹತ್ತಿರದಲ್ಲೇ ಹಮ್ಝರ ಮನೆ ಇತ್ತು. ಅಬೂಜಹಲ್ ಮಾಡಿದುದನ್ನೆಲ್ಲ ಹಝ್ರತ್ ಹಮ್ಝರ ಒಬ್ಬ ದಾಸಿ ಮನೆ ಬಾಗಿಲಲ್ಲಿ ನಿಂತು ನೋಡುತ್ತಿದ್ದಳು. ಆದರೆ ಅವಳಿಗೆ ಏನೂ ಮಾಡಲು ಸಾಧ್ಯವಿರಲಿಲ್ಲ. ಅವಳು ಆ ಸಂಭವದ ಬಗ್ಗೆ ಬಹಳ ಸಂತಾಪಗೊಂಡಿದ್ದಳು. ಹಝ್ರತ್ ಹಮ್ಝ ಪ್ರತಿದಿನ ಬೆಳಗ್ಗೆ ಬಿಲ್ಲುಬಾಣವನ್ನು ತೆಗೆದುಕೊಂಡು ಶಿಕಾರಿಗೆ ಹೋಗುತ್ತಿರುವುದು ಅವರ ರೂಢಿಯಾಗಿತ್ತು. ಅವರು ಸಾಯಂಕಾಲ ಮರಳಿ ಬರುತ್ತಿದ್ದರು. ಸಂಜೆ ಹಝ್ರತ್ ಹಮ್ಝ ಶಿಕಾರಿಯಿಂದ ಮರಳಿ ಬಂದಾಗ ದಾಸಿ ಅವರೊಂದಿಗೆ ಹೇಳಿದಳು: 'ನೀವು ಬಹಳ ದೊಡ್ಡ ಶೂರನಾಗಿ ತಿರುಗಾಡುತ್ತಿರುವಿರಿ. ನಿಮಗೆ ನಾಚಿಕೆಯಾಗಬೇಕಾಗಿದೆ. ಹಝ್ರತ್ ಹಮ್ಝ ಆಶ್ಚರ್ಯದಿಂದ ಕೇಳಿದರು: ವಿಷಯವೇನು ಎಂದು. ದಾಸಿ ಹೇಳಿದಳು: ನಿಮ್ಮ ಸಹೋದರ ಪುತ್ರ ಕುಳಿತಿದ್ದಾಗ ಅಬೂಜಹಲ್ ಆಗಮಿಸಿ ಆಕ್ರಮಣ ಮಾಡಿದನು. ಮತ್ತು ನಿರಂತರ ಬೈಯ್ಯುತ್ತಾ ಇದ್ದನು. ಅನಂತರ ನಿಮ್ಮ ಸಹೋದರ ಪುತ್ರನ ಮುಖಕ್ಕೆ ಹೊಡೆದನು. ಆದರೂ ಅವರು ಏನೂ ಉತ್ತರ ಹೇಳದೆ ಮೌನವಾಗಿ ಕುಳಿತಿದ್ದರು. ಹಝ್ರತ್ ಹಮ್ಝ ಈ ಸಂಭವವನ್ನು ದಾಸಿಯಿಂದ ಆಲಿಸಿದಾಗ ಅವರ ಕಣ್ಣುಗಳು ರಕ್ತಮಯವಾಯಿತು. ಅವರಿಗೆ ತಮ್ಮ ಕೌಟುಂಬಿಕ ಅಭಿಮಾನದ ಹುರುಪುಂಟಾಯಿತು. ಅವರು ವಿಶ್ರಾಂತಿ ಪಡೆಯದೆ ಸಿಟ್ಟುಗೊಂಡು ಕಅಬದ ಕಡೆಗೆ ಹೋದರು. ಅವರು ಮೊದಲು ಕಅಬದ ಪ್ರದಕ್ಷಿಣೆ ಮಾಡಿದರು. ಅನಂತರ ಅವರು ಜನರು ಕುಳಿತಿದ್ದ ಸ್ಥಳಕ್ಕೆ ಹೋದರು. ಅಲ್ಲಿ ಅಬೂಜಹಲ್ ನಡೆದ ಸಂಭವವನ್ನು ವಿವರಿಸುತ್ತಾ ಹರಟೆ ಕೊಚ್ಚುತ್ತಿದ್ದನು. ಅವನು ಬಹಳ ದುರಹಂಕಾರದಿಂದ ಹೇಳುತ್ತಿದ್ದನು– ನಾನು ಇಂದು ಮುಹಮ್ಮದನಿಗೆ ಈ ರೀತಿ ಬೈದೆ ಮತ್ತು ಅವನೊಂದಿಗೆ ಹೀಗೆ ವರ್ತಿಸಿದೆ ಎಂದು. ಹಝ್ರತ್ ಹಮ್ಝ ಕೂಡಲೆ ತನ್ನ ಬಿಲ್ಲಿನಿಂದ ಅಬೂಜಹಲನಿಗೆ ಬಲಯುತವಾಗಿ ಹೊಡೆದು ಹೇಳಿದರು: ನೀನು ನಿನ್ನ ಶೌರ್ಯದ ಬಗ್ಗೆ ವಿವರಿಸುತ್ತಿರುವೆ. ಮುಹಮ್ಮದರನ್ನು ಹೇಗೆ ಹೀನೈಸಿದೆ ಎಂದು. ಈಗ ನಾನು ನಿನ್ನನ್ನು ಹೀನೈಸುತ್ತೇನೆ. ನಿನ್ನಲ್ಲಿ ಧೈರ್ಯವಿದ್ದರೆ ನನ್ನೆದುರಿಗೆ ಮಾತನಾಡು ಎಂದು ಹೇಳಿದರು. ಅಬೂಜಹಲ್ ಮಕ್ಕದಲ್ಲಿ ಒಬ್ಬ ಶೌರ್ಯವಂತ ದೊರೆಯ ಸ್ಥಾನ ಹೊಂದಿದ್ದನು. ಅವನು ಸಮುದಾಯದ ಮುಖಂಡನಾಗಿದ್ದನು. ಅವನ ಸಂಗಡಿಗರು ಆ ಸಂಭವವನ್ನು ಕಂಡಾಗ ಅವರು ರೊಚ್ಚಿಗೆದ್ದು ಹಝ್ರತ್ ಹಮ್ಝರನ್ನು ಆಕ್ರಮಿಸಲು ಮುಂದಾದರು. ಆದರೆ ಅಬೂಜಹಲನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೌನವಾಗಿ ಅವನ ಆಕ್ರಮಣಗಳನ್ನು ಸಹಿಸಿದುದರಿಂದ ಮತ್ತು ಹಝ್ರತ್ ಹಮ್ಝರವರ ಧೈರ್ಯದಿಂದ ಪ್ರಭಾವಿತನಾಗಿದ್ದನು. ಅವನು ತಕ್ಷಣ ತನ್ನ ಸಂಗಡಿಗರನ್ನು ಆಕ್ರಮಣದಿಂದ ತಡೆದನು. ನೀವು ಬಿಟ್ಟು ಬಿಡಿರಿ ವಾಸ್ತವಿಕವಾಗಿ ನನ್ನಿಂದಲೇ ಅತಿಕ್ರಮ ಸಂಭವಿಸಿದೆ, ಹಮ್ಝರದ್ದು ಏನೂ ತಪ್ಪಿಲ್ಲ ಎಂದು ಹೇಳಿದನು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನ ಅಭಿಪ್ರಾಯ ಪ್ರಕಾರ ಹೀಗೆ ಬರೆದಿದ್ದಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಫಾ ಮತ್ತು ಮರ್ವಾದ ಬೆಟ್ಟಗಳಿಂದ ಮನೆಗೆ ಮರಳಿ ಬರುತ್ತಿದ್ದಾಗ ತನ್ನ ಹೃದಯದಲ್ಲಿ ಹೇಳುತ್ತಿದ್ದರು. ನನ್ನ ಕೆಲಸ ಜಗಳ ಮಾಡುವುದಲ್ಲ, ಸಹನೆಯಿಂದ ಬೈಗಳನ್ನು ಸಹಿಸುವುದಾಗಿದೆ ಎಂದು. ಆದರೆ ಅಲ್ಲಾಹನು ತನ್ನ ಅರ್ಶ್‌ನಲ್ಲಿ ಹೇಳುತ್ತಿದ್ದನು: ಓ ಮುಹಮ್ಮದ್ ನೀನು ಹೋರಾಡಲು ಸಿದ್ಧನಿಲ್ಲ. ಆದರೆ ನಿನ್ನ ಪರವಾಗಿ ನಿನ್ನ ಶತ್ರುಗಳನ್ನು ಪ್ರತಿರೋಧಿಸಲು ನಾನಿಲ್ಲವೇ? ಈ ಕಾರಣದಿಂದ ಅಲ್ಲಾಹನು ಅದೇ ದಿನ ಅಬೂಜಹಲನನ್ನು ಪ್ರತಿರೋಧಿಸುವವನಾದ ಮತ್ತು ತನ್ನ ಜೀವಾರ್ಪಣೆಗೆ ಸಿದ್ಧನಾದ ಒಬ್ಬನನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನೀಡಿದನು. ಹಝ್ರತ್ ಹಮ್ಝರವರು ಅಬೂಜಹಲನನ್ನು ಆಕ್ರಮಿಸಿದಾಗ ಅಲ್ಲಿ ನೆರೆದಿದ್ದವರೊಂದಿಗೆ ತಾನು ಮುಸ್ಲಿಮನಾದ ಬಗ್ಗೆ ಪ್ರಕಟಿಸಿದರು. ಮತ್ತು ಅಬೂಜಹಲನನ್ನು ಸಂಬೋಧಿಸಿ ಹೇಳಿದರು: ನೀನು ಮುಹಮ್ಮದರಿಗೆ ಬೈದೆ. ಅವರು 'ನಾನು ಅಲ್ಲಾಹನ ಸಂದೇಶವಾಹಕನಾಗಿರುವೆನು. ದೇವ ದೂತರು ನನ್ನ ಬಳಿಗೆ ಇಳಿದು ಬರುತ್ತಾರೆ ಎಂದು ವಾದಿಸಿದ ಕಾರಣದಿಂದ. ನೀನು ಕಿವಿ ತೆರೆದು ಆಲಿಸು. ನಾನು ಸಹ ಇಂದಿನಿಂದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧರ್ಮಕ್ಕೆ ಸೇರಿದ್ದೇನೆ. ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುವುದನ್ನೇ ನಾನು ಸಹ ಹೇಳುವೆನು. ನಿನ್ನಲ್ಲಿ ಧೈರ್ಯವಿದ್ದರೆ ನೀನು ಬಂದು ನನ್ನನ್ನು ಎದುರಿಸು.' ಹೀಗೆ ಹೇಳಿ ಹಝ್ರತ್ ಹಮ್ಝ ಮುಸ್ಲಿಮರಾದರು. ಹದೀಸುಗಳಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಹಮ್ಝ ಮುಸ್ಲಿಮರಾದ ನಂತರ ಮಕ್ಕದಲ್ಲಿದ್ದ ಮುಸ್ಲಿಮರ ವಿಶ್ವಾಸ ಬಹಳ ಬಲಿಷ್ಠವಾಯಿತು. ನಂತರ ಹಝ್ರತ್ ಹಮ್ಝ ಸಹ ಇತರ ಮುಸ್ಲಿಮರೊಂದಿಗೆ ಮದೀನಕ್ಕೆ ವಲಸೆ ಹೋದರು.

ಮದೀನಕ್ಕೆ ವಲಸೆ ಹೋದ ನಂತರ ಸಹ ಮಕ್ಕದ ಅವಿಶ್ವಾಸಿಗಳ ಉಪದ್ರವಗಳು ಕೊನೆಗೊಳ್ಳಲಿಲ್ಲ. ಆದುದರಿಂದ ಮುಸ್ಲಿಮರು ಬಹಳ ಜಾಗರೂಕರಾಗಿರಬೇಕಾಗುತ್ತಿತ್ತು. ಅವರು ಅವಿಶ್ವಾಸಿಗಳ ಚಲನ ವಲನಗಳ ಮೇಲೆ ದೃಷ್ಟಿ ಇಡಬೇಕಾಗುತ್ತಿತ್ತು. ಹದೀಸುಗಳಲ್ಲಿ ವರದಿಯಾಗಿದೆ, ಅವಿಶ್ವಾಸಿಗಳ ಚಲನ ವಲನಗಳನ್ನು ಮತ್ತು ಆಕ್ರಮಕಾರಿ ಕೃತ್ಯಗಳನ್ನು ಅರಿತುಕೊಳ್ಳಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರತಿರೋಧಕ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತಿತ್ತು. ಅವುಗಳಿಗೆ ಸಂಬಂಧಿಸಿ ಹಝ್ರತ್ ಹಮ್ಝ ಅಸಾಧಾರಣವಾದ ಸೇವೆ ಸಲ್ಲಿಸುವ ಭಾಗ್ಯ ಗಳಿಸಿದರು. ಹಿಜರಿ ಎರಡನೆಯ ವರ್ಷದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹಮ್ಝರವರ ನಾಯಕತ್ವದಲ್ಲಿ ಮೂವತ್ತು ಕುದುರೆ ಸವಾರರಾದ ಮುಹಾಜಿರ್‌ಗಳನ್ನು ಒಂದು ಪ್ರದೇಶಕ್ಕೆ ಕಳುಹಿಸಿದ್ದರು. ಹಝ್ರತ್ ಹಮ್ಝ ಮತ್ತು ಜೊತೆಗಾರರು ಅಲ್ಲಿಗೆ ತಲಪಿದಾಗ ಅವರು ಅಲ್ಲಿ ಕಂಡದ್ದೇನು? ಅಬೂಜಹಲನು ಮುನ್ನೂರು ಕುದುರೆ ಸವಾರರ ಒಂದು ದಳದೊಂದಿಗೆ ಅಲ್ಲಿ ಅವರೆದುರಿಗೆ ನಿಂತಿದ್ದನು. ಮುಸ್ಲಿಮರ ಸಂಖ್ಯೆಗಿಂತ ಅವರ ಸಂಖ್ಯೆ ಹತ್ತು ಪಟ್ಟು ಹೆಚ್ಚಾಗಿತ್ತು. ಎರಡು ಸೇನಾದಳಗಳ ಮಧ್ಯೆ ಪರಸ್ಪರ ಹೋರಾಟ ಪ್ರಾರಂಭವಾಗಲಿದ್ದಾಗ, ಆ ಪ್ರದೇಶದ ಮುಖ್ಯಸ್ಥ ಮಜ್‌ದಿ ಬಿನ್

ಅಮರುಲ್ ಜಹ್‌ನಿ ಎರಡು ವಿಭಾಗಗಳೊಂದಿಗೆ ಉತ್ತಮ ಸಂಬಂಧ ಹೊಂದಿದವನಾಗಿದ್ದುದರಿಂದ ಮಧ್ಯಪ್ರವೇಶ ಮಾಡಿ ಯುದ್ಧವಾಗದಂತೆ ತಡೆದರು.

ಮದೀನಕ್ಕೆ ಹಿಜ್ರತ್ ಮಾಡಿದ ನಂತರ ಇತರ ಮುಸ್ಲಿಮರ ಹಾಗೆಯೇ ಹಝ್ರತ್ ಹಮ್‌ಝರ ಸಾಂಪತ್ತಿಕ ಸ್ಥಿತಿ ಸಹ ಬಹಳ ಕೆಟ್ಟು ಹೋಗಿತ್ತು. ಹಝ್ರತ್ ಅಬ್ದುಲ್ಲ ಬಿನ್ ಅಮರ್ ವರದಿ ಮಾಡುತ್ತಾರೆ: ಆ ಸಮಯದಲ್ಲಿ ಹಝ್ರತ್ ಹಮ್‌ಝ ಒಂದು ದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ಯಾವುದಾದರೂ ಕೆಲಸವನ್ನು ನನಗೆ ವಹಿಸಿಕೊಡಿ. ಆ ಮೂಲಕ ನನಗೆ ಜೀವನಾಧಾರ ದೊರಕುವಂತಾಗಲಿ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಓ ಹಮ್‌ಝ, ಆತ್ಮಾಭಿಮಾನವನ್ನು ರಕ್ಷಿಸುವುದು ಮುಖ್ಯವೋ ಅಥವಾ ಅದನ್ನು ನಾಶ ಮಾಡುವುದೋ? ಹಝ್ರತ್ ಹಮ್‌ಝ ಹೇಳಿದರು: ನಾನು ಅದನ್ನು ಜೀವಂತವಾಗಿಡಲು ಇಚ್ಛಿಸುತ್ತೇನೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ನಿಮ್ಮ ಆತ್ಮಗೌರವವನ್ನು ಸಂರಕ್ಷಿಸಿರಿ. ಅನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಾರ್ಥನೆಯನ್ನು ಹೆಚ್ಚು ಹೆಚ್ಚಾಗಿ ಮಾಡಲು ಹೇಳಿದರು ಮತ್ತು ಕೆಲವು ವಿಶಿಷ್ಟ ಪ್ರಾರ್ಥನೆಗಳನ್ನು ಕಲಿಸಿದರು. ಹಝ್ರತ್ ಹಮ್‌ಝ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ದುಆ ಹೆಚ್ಚು ಹೆಚ್ಚಾಗಿ ಮಾಡಲು ಹೇಳಿದರು: **ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಬಿಸ್ಮಿಕಲ್‌ಅಅ್‌ಝುಮಿ ವ ರಿಝ್‌ವಾನಿಕಲ್ ಅಕ್‌ಬರ್.** ಓ ಅಲ್ಲಾಹ್, ನಾನು ನಿನ್ನ ಮಹಾಮಹಿಮೆಯ ನಾಮದ ಮೂಲಕ ಮತ್ತು ನಿನ್ನ ಅತ್ಯಂತ ಹಿರಿಯ ಸಂಪ್ರೀತಿ ಮೂಲಕ ಬೇಡಿಕೊಳ್ಳುತ್ತೇನೆ. ಹಝ್ರತ್ ಹಮ್‌ಝ ಯಾವಾಗಲೂ ಈ ಪ್ರಾರ್ಥನೆಯ ಲಾಭ ಪಡೆಯುತ್ತಿದ್ದರು.

ಹಿಜರಿ ದ್ವಿತೀಯ ವರ್ಷದಲ್ಲಿ ಪ್ರಸಿದ್ಧವಾದ ಬದರ್ ಯುದ್ಧ ನಡೆಯಿತು. ಆ ಸಂದರ್ಭದಲ್ಲಿ ಅವಿಶ್ವಾಸಿಗಳ ಕಡೆಯಿಂದ ಅಸ್‌ವದ್ ಬಿನ್ ಅಬ್ದುಲ್ ಅಸದ್ ಮಖ್‌ಝೂಮಿ ಎಂಬೊಬ್ಬ ಅತ್ಯಂತ ಉದ್ಧಟನಾದ ಕೆಟ್ಟ ಮನುಷ್ಯನು ಹೀಗೆ ಪ್ರತಿಜ್ಞೆ ಮಾಡಿದ್ದನು. ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೌಝ್(ಕೊಳ) ಬಳಿ ಹೋಗಿ ನೀರು ಕುಡಿಯುವೆನು. ಅಥವಾ ಅದನ್ನು ಧ್ವಂಸ ಮಾಡುವೆನು. ಅಥವಾ ಕೆಡಿಸುವೆನು. ಅಥವಾ ಅದರ ಬಳಿ ನಾನು ಸಾಯುವೆನು. ಅವನು ಈ ಇರಾದೆಯಿಂದ ಹೊರಟಾಗ ಹಝ್ರತ್ ಹಮ್‌ಝ ಅವನನ್ನು ಎದುರಿಸಿದರು. ಅವರಿಬ್ಬರು ಹೋರಾಡತೊಡಗಿದಾಗ ಹಝ್ರತ್ ಹಮ್‌ಝ ಖಡ್ಗದಿಂದ ಅವನ ಹಿಮ್ಮಡಿಯ ಅರ್ಧಭಾಗ ಕತ್ತರಿಸಿದರು. ಅವನು ಹೌಝ್ ಸಮೀಪವಿದ್ದನು. ಅವನು ಬಿದ್ದುಬಿಟ್ಟರೂ ತನ್ನ ಶಪಥ ನೆರವೇರಿಸಲು ಹೌಝ್ ಕಡೆಗೆ ತೆವಳಿ ಹೋದನು. ಹಝ್ರತ್ ಹಮ್‌ಝ ಅವನ ಕಡೆಗೆ ಖಡ್ಗ ಬೀಸಿ ಅವನನ್ನು ಕೊಂದು ಹಾಕಿದರು.

ಹಝ್ರತ್ ಅಲಿ(ರ) ಬದರ್ ಯುದ್ಧದ ಬಗ್ಗೆ ಹೇಳುತ್ತಾರೆ: ಅವಿಶ್ವಾಸಿಗಳ ಸಂಖ್ಯೆ ಮುಸ್ಲಿಮರಿಗಿಂತ ಬಹಳ ಹೆಚ್ಚಿಗೆ ಇತ್ತು. ರಾತ್ರಿಯಿಡೀ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿನಯಾನ್ವಿತರಾಗಿ ಅಳಲಿನೊಂದಿಗೆ ತನ್ನ ಪ್ರಭುವಿನೊಡನೆ ಪ್ರಾರ್ಥಿಸುತ್ತಾ ಇದ್ದರು. ಹಝ್ರತ್ ಅಲಿ(ರ) ಹೇಳುತ್ತಾರೆ: ಉತ್‌ಬ ಬಿನ್ ರಬೀಅ ಮತ್ತು ಅವನ ಹಿಂದೆ ಅವನ ಪುತ್ರ ಮತ್ತು ಸಹೋದರ ಹೊರಟು ಎತ್ತಿದ ಧ್ವನಿಯಲ್ಲಿ ಹೇಳಿದರು: ನಮ್ಮನ್ನು ಎದುರಿಸುವವರು ಯಾರಿದ್ದಾರೆ ಎಂದು. ಉತ್‌ಬ ಹೇಳಿದ: ನಾವು ನಮ್ಮ ಚಿಕ್ಕಪ್ಪನ ಮಕ್ಕಳ ವಿರುದ್ಧ ಮಾತ್ರ ಯುದ್ಧ ಮಾಡುವೆವು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಓ ಹಮ್‌ಝ, ಓ ಅಲಿ, ಓ ಉಬೈದ ಬಿನ್ ಹಾರಿಸ್, ಮುಂದೆ ಸಾಗಿರಿ. ಹಝ್ರತ್ ಅಲಿ ಹೇಳುತ್ತಾರೆ: ಹಮ್‌ಝರು ಉತ್‌ಬನ ಕಡೆಗೆ ಮುಂದುವರಿದರು. ನಾನು ಶೈಬನ ಕಡೆಗೆ ಸಾಗಿದೆ. ಉಬೈದ ಮತ್ತು ವಲೀದ್ ಮಧ್ಯೆ ಹೋರಾಟ ಪ್ರಾರಂಭವಾಯಿತು. ಹಝ್ರತ್ ಅಲಿ ಮತ್ತು ಹಝ್ರತ್ ಹಮ್‌ಝ ತಮ್ಮ ಎದುರಾಳಿಗಳನ್ನು ಕೊಂದರು. ಹಝ್ರತ್ ಹಮ್‌ಝ ತಮ್ಮ ಶೌರ್ಯ ಪ್ರದರ್ಶನಕ್ಕೋಸ್ಕರ ಉಷ್ಟ್ರಪಕ್ಷಿಯ ಗರಿಯನ್ನು ತಮ್ಮ ಯುದ್ಧದ ಚಿಹ್ನೆಯಾಗಿ ಅಳವಡಿಸಿದ್ದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ವರದಿ ಮಾಡುತ್ತಾರೆ: ಉಮಯ್ಯ ಬಿನ್ ಖಲ್‌ಫ್ ಖುರೈಶಿಗಳ ಒಬ್ಬ ಮುಖಂಡನಾಗಿದ್ದನು ಮತ್ತು ಮಕ್ಕದಲ್ಲಿ ಹಝ್ರತ್ ಬಿಲಾಲರಿಗೆ ಬಹಳ ಕಷ್ಟ ಕೊಡುತ್ತಿದ್ದನು. ಅವನು ಬದರ್ ಯುದ್ಧದಲ್ಲಿ ಅನ್‌ಸಾರ್‌ಗಳಿಂದ ಕೊಲ್ಲಲ್ಪಟ್ಟಿದ್ದನು. ಅವನು ನನ್ನೊಂದಿಗೆ ಕೇಳಿದನು: ತನ್ನ ಎದೆಯಲ್ಲಿ ಉಷ್ಟ್ರಪಕ್ಷಿಯ ಗರಿ ಸಿಲುಕಿಸಿರುವ ವ್ಯಕ್ತಿ ಯಾರೆಂದು. ನಾನು ಹೇಳಿದೆ ಅವರು ಹಮ್‌ಝ ಬಿನ್ ಮುತ್ತಲಿಬ್ ಆಗಿದ್ದಾರೆ. ಆಗ ಉಮಯ್ಯ ಹೇಳಿದನು: ಈ ವ್ಯಕ್ತಿಯೇ ನಮಗೆ ಇಂದು ಬಹಳ ಹೆಚ್ಚು ತೊಂದರೆ ನೀಡಿದ್ದಾನೆ.

ಆಂಗ್ಲ ಚರಿತ್ರೆಗಾರ ಸರ್ ವಿಲಿಯಂ ಮ್ಯೂರ್ ಬದರ್ ಯುದ್ಧದಲ್ಲಿ ಹಝ್ರತ್ ಹಮ್‌ಝ ಭಾಗವಹಿಸಿದ ಬಗ್ಗೆ ಬರೆಯುತ್ತಾರೆ: ಹಝ್ರತ್ ಹಮ್‌ಝ ಹಾರಾಡುತ್ತಿರುವ ಉಷ್ಟ್ರಪಕ್ಷಿಯ ಗರಿಯೊಂದಿಗೆ ಪ್ರತಿಯೊಂದು ಸ್ಥಳದಲ್ಲಿ ಎದ್ದು ಕಾಣಿಸುತ್ತಿದ್ದರು. ಅವರು ಇತರ ಅನೇಕ ಖುರೈಶಿ ನಾಯಕರನ್ನು ಸಹ ಯುದ್ಧದಲ್ಲಿ ಹತ್ಯೆ ಮಾಡಿದ್ದರು. ಉಹುದ್ ಯುದ್ಧದಲ್ಲಿಯೂ ಹಝ್ರತ್ ಹಮ್‌ಝ ತನ್ನ ಶೌರ್ಯವನ್ನು ಪ್ರದರ್ಶಿಸಿದ್ದರು. ಅವರ ಈ ಶೌರ್ಯ ಪ್ರದರ್ಶನ ಖುರೈಶಿಗಳ ದೃಷ್ಟಿಯಲ್ಲಿ ಅಸಹನೀಯವಾಗಿತ್ತು. ಬುಖಾರಿಯ ಗ್ರಂಥದಲ್ಲಿ ಅದರ ಬಗ್ಗೆ ಹೀಗೆ ಹೇಳಲಾಗಿದೆ: ಉಮೈರ್ ಬಿನ್ ಇಸ್‌ಹಾಖ್ ವರದಿ ಮಾಡುತ್ತಾರೆ: ಉಹುದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಹಮ್‌ಝ ಬಿನ್ ಅಬ್ದುಲ್ ಮುತ್ತಲಿಬ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂಭಾಗದಲ್ಲಿ ನಿಂತು ಎರಡು ಖಡ್ಗಗಳನ್ನು ಹಿಡಿದು ಹೋರಾಡುತ್ತಿದ್ದರು. ನಾನು ಅಸದುಲ್ಲಾಹ್ ಆಗಿರುವೆನು ಎಂದು ಹೇಳುತ್ತಿದ್ದರು. ಅವರು ಕೆಲವು ಸಾರಿ ಮುಂದೆ ಸಾಗಿ ಕೆಲವು ಸಾರಿ ಹಿಂದೆ ಸರಿದು ಹೋರಾಡುತ್ತಿದ್ದರು. ಆಗ ಅವರು ಅಚಾನಕವಾಗಿ ತಮ್ಮ ಬೆನ್ನ ಕಡೆಗೆ ಬಿದ್ದು ಬಿಟ್ಟರು. ಅದನ್ನು ವಹ್‌ಶೀ ಅಸ್‌ವದ್ ಎಂಬವನು ನೋಡಿದನು. ಅಬೂ ಉಸಾಮ ವರದಿ ಮಾಡುತ್ತಾರೆ: ವಹ್‌ಶೀ ಅಸ್‌ವದ್ ಅವರನ್ನು ಈಟಿಯಿಂದ ತಿವಿದು ಕೊಂದನು. ಹಾಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜ್‌ರತ್ ಮಾಡಿದ ಮೂವತ್ತೆರಡನೆಯ ತಿಂಗಳಲ್ಲಿ ಉಹುದ್ ಯುದ್ಧದಲ್ಲಿ ಹಝ್ರತ್ ಹಮ್‌ಝ ಶಹೀದರಾದರು. ಆಗ ಅವರ ಪ್ರಾಯ 59 ಆಗಿತ್ತು. ಸೀರತ್ ಇಬ್ನು ಹಿಶಾಮ್ ಗ್ರಂಥದಲ್ಲಿ ಹೀಗೆ ಬರೆದಿದೆ:

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹಮ್ಝರ ಮಯ್ಯತ್ ಬಳಿ ನಿಂತು ಹೇಳಿದರು: ಓ ಹಮ್ಝಾ, ನಿನ್ನ ಮೃತ್ಯುವಿನಿಂದ ಸಂಭವಿಸಿದಂತಹ ವಿಪತ್ತು ನನಗೆ ಹಿಂದೆಂದೂ ಸಂಭವಿಸಿರಲಿಲ್ಲ. ನಾನು ಇದಕ್ಕಿಂತ ದುಃಖಕರವಾದ ಬೇರೊಂದು ದೃಶ್ಯ ಇಂದಿನ ತನಕ ಕಂಡಿಲ್ಲ. ಜಿಬ್ರೀಲ್ ಬಂದು ನನಗೆ ತಿಳಿಸಿದ್ದಾರೆ ಏಳು ಆಕಾಶಗಳಲ್ಲಿ ಅಲ್ಲಾಹನು ಹಮ್ಝು ಬಿನ್ ಅಬ್ದುಲ್ ಮುತ್ತಲಿಬರನ್ನು ತನ್ನ ಮತ್ತು ತನ್ನ ಸಂದೇಶವಾಹಕರ ಸಿಂಹ ಎಂದು ಬರೆದಿದ್ದಾನೆ.

ಹಝ್ರತ್ ಝುಬೈರ್ ವರದಿ ಮಾಡುತ್ತಾರೆ: ಉಹುದ್ ಯುದ್ಧ ಮುಕ್ತಾಯವಾದ ದಿನ ನನ್ನ ತಾಯಿ ಹಝ್ರತ್ ಸಫಿಯಾ ಬಹಳ ವೇಗವಾಗಿ ಯುದ್ಧ ಕ್ಷೇತ್ರಕ್ಕೆ ಬರುವುದಾಗಿ ಕಾಣಿಸಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದನ್ನು ಇಷ್ಟಪಡಲಿಲ್ಲ. ಮಹಿಳೆಯೊಬ್ಬಳು ಬಂದು ಶಹೀದರ ಮೃತಶರೀರಗಳನ್ನು ನೋಡುವುದನ್ನು ಅವರು ಇಷ್ಟಪಡಲಿಲ್ಲ. ಅವರು ಹೇಳಿದರು, ಆ ಮಹಿಳೆಯನ್ನು ತಡೆಯಿರಿ. ನಾನು ಓಡಿಹೋಗಿ ಅವರನ್ನು ತಡೆಯಲು ಮುಂದಾದಾಗ ಅವರು ನನ್ನ ಎದೆಗೆ ಹೊಡೆದು ನನ್ನನ್ನು ಹಿಂದೆ ತಳ್ಳಿ ಹೇಳಿದರು: ನಿನ್ನ ಮಾತು ನಾನು ಕೇಳಲಾರೆ, ನೀನು ಹಿಂದೆ ಸರಿ. ನಾನು ಹೇಳಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮನ್ನು ತಡೆಯಲು ಹೇಳಿದ್ದಾರೆ ನೀವು ಆ ಮೃತಶರೀರಗಳನ್ನು ನೋಡಬಾರದೆಂದು. ಆ ಮಾತು ಕೇಳಿದ ಕೂಡಲೆ ಅವರು ನಿಂತು ಬಿಟ್ಟರು. ಅವರು ತಮ್ಮ ಬಳಿ ಇದ್ದ ಎರಡು ಬಟ್ಟೆಗಳನ್ನು ನನಗೆ ಕೊಟ್ಟು ಹೇಳಿದರು: ಈ ಎರಡು ಬಟ್ಟೆಗಳನ್ನು ನನ್ನ ಸಹೋದರ ಹಮ್ಝುನಿಗೋಸ್ಕರ ತಂದಿದ್ದೇನೆ. ನನಗೆ ಅವನ ಶಹಾದತ್ ಬಗ್ಗೆ ಸಮಾಚಾರ ದೊರೆತಿದೆ ಎಂದು ಹೇಳಿದರು. ಇದು ಆ ಕಾಲದ ಅನುಸರಣೆಯ ಮಾದರಿಯಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಯನ್ನು ಆಲಿಸಿದ ಕೂಡಲೆ ಆ ಮಹಿಳೆ ಬಹಳ ದುಃಖದಿಂದಿದ್ದರೂ ಆಕೆ ಬಹಳ ಭಾವೋದ್ವೇಗ ಭರಿತೆಯಾಗಿದ್ದರೂ ತಕ್ಷಣ ತನ್ನ ಭಾವೋದ್ವೇಗಗಳನ್ನು ಹತೋಟಿಗೆ ತಂದರು. ಇದು ಪರಿಪೂರ್ಣ ಅನುಸರಣೆಯ ವಿಧಾನವಾಗಿದೆ.

ಹಝ್ರತ್ ಹಮ್ಝುರವರಿಗೆ ಒಂದು ಬಟ್ಟೆಯ ಕಫನ್ ಹೊದಿಸಲಾಯಿತು. ಅದು ಅವರ ತಲೆಯನ್ನು ಆವರಿಸಿದಾಗ ಅವರ ಕಾಲುಗಳಿಂದ ಬಟ್ಟೆ ಸರಿದು ಹೋಗುತ್ತಿತ್ತು. ಬಟ್ಟೆಯನ್ನು ಕಾಲುಗಳು ಮುಚ್ಚುವಂತೆ ಹೊದಿಸಿದಾಗ ಅವರ ಮುಖ ನಗ್ನವಾಗುತ್ತಿತ್ತು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅವರ ಮುಖವನ್ನು ಬಟ್ಟೆಯಿಂದ ಮುಚ್ಚಿರಿ. ಕಾಲುಗಳ ಮೇಲೆ ಹುಲ್ಲು ಹಾಸಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹಮ್ಝುರವರ ಜನಾಝು ನಮಾಝ್ ಇತರ ಶಹೀದರ ಜನಾಝುದೊಂದಿಗೆ ಎಪ್ಪತ್ತು ಸಾರಿ ನಿರ್ವಹಿಸಿದರು. ಏಕೆಂದರೆ ಹಝ್ರತ್ ಹಮ್ಝುರವರ ಮೃತದೇಹ ಅಲ್ಲಿಯೇ ಇರುತ್ತಿತ್ತು.

ಆ ಸಹಾಬರು ಎಂತಹ ಜನರಾಗಿದ್ದಾರೆಂದರೆ ಅವರು ಅಲ್ಲಾಹನ ಸಂಪ್ರೀತಿ ಗಳಿಸಿದರು. ಅಲ್ಲಾಹನು ಅವರಿಂದ ಸಂಪ್ರೀತನಾದನು. ಅವರು ತಮ್ಮ ಐಶ್ವರ್ಯದ ಕಾಲದಲ್ಲಿ ತಮ್ಮ ಬಡ ಸಹೋದರರ ಬಗ್ಗೆ ಲಕ್ಷ್ಯ ನೀಡುತ್ತಿದ್ದರು. ಮತ್ತು ತಮ್ಮ ಹಿಂದಿನ ಸ್ಥಿತಿಯನ್ನು ನೆನಪಿನಲ್ಲಿಡುತ್ತಿದ್ದರು. ಅಲ್ಲಾಹನು ಅವರೆಲ್ಲರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ.

ಕಅಬ್ ಬಿನ್ ಮಾಲಿಕ್ ಹಝ್ರತ್ ಹಮ್ಝುರವರ ಶಹಾದತ್ ನಂತರ ಶೋಕಗೀತೆಯಲ್ಲಿ ಹೇಳಿದರು: ನನ್ನ ಕಣ್ಣುಗಳು ಕಣ್ಣೀರು ಸುರಿಸುತ್ತಿವೆ. ಹಮ್ಝುರವರ ಶಹಾದತ್ ಬಗ್ಗೆ ರೋಧಿಸಲು ಅವುಗಳಿಗೆ ಸರಿಯಾದ ಹಕ್ಕು ಇದೆ. ಆದರೆ ಅಲ್ಲಾಹನ ಸಿಂಹದ ಮೃತ್ಯುವಿನ ಬಗ್ಗೆ ರೋಧಿಸಿ ಗೋಳಿಡುವುದರಿಂದ ಪ್ರಯೋಜನವಾದರೂ ಏನಿದೆ. ಅಲ್ಲಾಹನ ಸಿಂಹವಾದ ಹಮ್ಝು ಶಹೀದರಾದಾಗ ಲೋಕ ಹೇಳಿತು ಈ ಶೌರ್ಯವಂತನೇ ಶಹೀದ್ ಆಗಿರುವನು ಎಂದು.

ಅಲ್ಲಾಹನು ಈ ಸಹಾಬರ ಪದವಿ ಉನ್ನತಿಗೊಳಿಸುತ್ತಾ ಇರಲಿ. ಅವರು ತಮ್ಮ ಬಲಿದಾನಗಳ ಮೂಲಕ ನೀಡಿದ ಉದಾಹರಣೆ ಲೋಕಾಂತ್ಯದ ತನಕ ಮುಸ್ಲಿಮರು ನೆನಪಿನಲ್ಲಿ ಇರಿಸುವಂತಾಗಲಿ. ಅವರು ಸ್ಥಾಪಿಸಿದ ಒಳಿತುಗಳನ್ನೂ ಅವರು ಪ್ರದರ್ಶಿಸಿದ ಸದ್ಗುಣಗಳನ್ನೂ ಅನುಷ್ಠಾನಕ್ಕೆ ತರುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis***$^{(atba)}$

*At Masjid Baithul Futhuh, London. On 04-05-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon